# ಸ್ವಾಮಿ ವಿವೇಕಾನಂದರು ನೀಡಿದ ಹಿಂದೂಧರ್ಮದ ಸಮಗ್ರಚಿತ್ರ

**ಎದುರ್ಕಳ ಕೆ. ಶಂಕರನಾರಾಯಣ ಭಟ್**

**ಆಧುನಿಕಯುಗದಲ್ಲಿನ ಜೀವನ ಸವಾಲುಗಳನ್ನು ಎದುರಿಸಲು ಅತ್ಯಂತ ಪ್ರಾಚೀನವಾದ ಹಿಂದೂಧರ್ಮದಲ್ಲಿನ ಶಕ್ತಿಮೂಲಗಳನ್ನು ತೋರಿಸಿಕೊಟ್ಟವರು ಸ್ವಾಮಿ ವಿವೇಕಾನಂದರು. ಸ್ವಾಮೀಜಿಯವರು ನಿರೂಪಿಸಿದ ಹಿಂದೂಧರ್ಮದ ಸಮಗ್ರಚಿತ್ರಣವನ್ನು ನೀಡಿರುವ ಎದುರ್ಕಳ ಕೆ. ಶಂಕರನಾರಾಯಣ ಭಟ್ಟರು ಹಿಂದೂಧರ್ಮದ ಬಗ್ಗೆ ಆಳವಾದ ಅಧ್ಯಯನ ನಡೆಸಿ ಕನ್ನಡದಲ್ಲಿ ಅನೇಕ ಕೃತಿಗಳನ್ನು ಹೊರತಂದಿರುವ ಹೆಸರಾಂತ ಲೇಖಕರು.**

ಪ್ರಾತಃಸ್ಮರಣೀಯರಾದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯಾಗ್ರಣಿಯಾದ ಸ್ವಾಮಿ ವಿವೇಕಾನಂದರು ಆಧುನಿಕ ಯುಗದಲ್ಲಿ ಭಾರತದಲ್ಲಿ ಮೂಡಿಬಂದ ಜಗದ್ವಂದ್ಯ ಹಿಂದೂ ಯತಿಪುಂಗವರು. ಸನಾತನ ಹಿಂದೂಧರ್ಮದ ನೂತನ ಭಾಷ್ಯಕಾರರಾಗಿ ಬಾಳಿ ಬೆಳಗಿದ ಸ್ವಾಮಿ ವಿವೇಕಾನಂದರು ಅನುಭಾವಿ ಮಹಾತ್ಮರು—ವೀರ ವೇದಾಂತಿಗಳು. ನಡೆನುಡಿಗಳಲ್ಲಿ ಹಿಂದೂಧರ್ಮದ ತತ್ತ್ವ-ಸಿದ್ಧಾಂತಗಳನ್ನು ಮೈಗೂಡಿಸಿ ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿ ಧರ್ಮದ ನಿಜವಾದ ಅರಿವು ಹಾಗೂ ಮೈತ್ರಿಯನ್ನು ಪರಿಣಾಮಕಾರಿಯಾಗಿ ಪ್ರಚುರಪಡಿಸಿದ ನವಯುಗಾಚಾರ್ಯರು ಸ್ವಾಮಿ ವಿವೇಕಾನಂದರು. ಅವರ ಅನುಪಮವಾದ ಸಂನ್ಯಾಸಜೀವನ, ಅಪಾರವಾದ ವೇದಾಂತವಿಜ್ಞಾನ ಸಂಪತ್ತು, ಅಸೀಮವಾದ ಮಾನವಪ್ರೇಮ, ಅಪರೂಪದ ದೇಶಭಕ್ತಿ, ಅಪೂರ್ವವಾದ ಲೋಕಪಾವನ ಹಾಗೂ ಲೋಕೋಪಕಾರಿಯಾದ ಸಂಘ-ಸಂಸ್ಥೆಗಳ ಸ್ಥಾಪನೆ, ವಿದ್ವತ್‌ಪೂರ್ಣವೂ ಪ್ರಸನ್ನ ಗಂಭೀರವೂ ಆದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪ್ರವಚನಗಳು, ಬರಹಗಳು—ಇವುಗಳು ಹಿಂದೂಧರ್ಮದ ತತ್ತ್ವಸೂತ್ರಗಳನ್ನು ಎಷ್ಟು ಸಮರ್ಪಕವಾಗಿ ಕಾರ್ಯರೂಪಕ್ಕೆ ತಂದು ಮಹೋಜ್ವಲವಾಗಿ ಬೆಳಗಿಸಬಹುದು ಎಂಬುದಕ್ಕೆ ಮಹೋನ್ನತ ನಿದರ್ಶನವಾಗಿವೆ.

> ಆಧುನಿಕ ಪ್ರಪಂಚದ ಸಾಂಸ್ಕೃತಿಕ ಭೂಪಟದಲ್ಲಿ ಹಿಂದೂಧರ್ಮಕ್ಕೆ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟವರು ಸ್ವಾಮಿ ವಿವೇಕಾನಂದರು ಎಂಬುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.
>
> *—ಆರ್.ಸಿ. ಮಜುಮ್‌ದಾರ್, ಪ್ರಸಿದ್ಧ ಇತಿಹಾಸಜ್ಞ.*

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಹಿಂದೂಧರ್ಮ ಎಂದರೆ ತತ್ತ್ವಗಳ ಕಂತೆಯಲ್ಲ, ಅದು ನಮ್ಮ ನಿತ್ಯಜೀವನದಲ್ಲಿ ಅನುಷ್ಠಾನಯೋಗ್ಯವಾದ ತತ್ತ್ವಸೂತ್ರಗಳ ಆಗರ. ಹಿಂದೂಧರ್ಮವು ವ್ಯಷ್ಟಿ ಹಾಗೂ ಸಮಷ್ಟಿಯ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸಬಲ್ಲ ಸೂತ್ರಗಳನ್ನು ಒಳಗೊಂಡಿರುವ ಸತ್ಯ ಸನಾತನಧರ್ಮ ಎಂಬುದು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಅನುಭವದ ಮೇಲೆ ಆಧಾರಿತವಾದ ದೃಢ ವಿಶ್ವಾಸವಾಗಿತ್ತು. ಧರ್ಮವಿರುವುದು ಜೀವನಕ್ಕಾಗಿ, ಕೇವಲ ವೈಚಾರಿಕ ಅರಿವಿಗಷ್ಟೇ ಅಲ್ಲ. ಅದೂ ಸೇರಿದಂತೆ ಜೀವನದಲ್ಲಿ ಧರ್ಮವನ್ನು ಆಚರಿಸಿ, ಆತ್ಮಸಾಕ್ಷಾತ್ಕಾರದ ಅನುಭವ ಗಳಿಸಿ ಮಾನವನು ಮಾಧವನಾಗಲು ಧರ್ಮ ಇರುವುದಾಗಿದೆ. ಅದೇ ಹಿಂದೂಧರ್ಮದ ಶಕ್ತಿ ಹಾಗೂ ಸಾರಸಂದೇಶ ಎಂಬುದು ಸ್ವಾಮಿ ವಿವೇಕಾನಂದರ ಉಜ್ವಲ ಘೋಷಣೆಯಾಗಿರುತ್ತದೆ.

ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ತತ್ತ್ವವಿಚಾರಗಳಿಗೆ ಹಳೆಯ ಚೌಕಟ್ಟಿನಲ್ಲಿ ಹೊಸವಿವರಣೆ ನೀಡಿ ಹಿಂದೂಧರ್ಮವು ಪರಿಪೂರ್ಣವಾಗಿ ಪ್ರಯೋಗಸಾಧ್ಯ ಎಂದು ಸಾರಿದರು. ಅರ್ವಾಚೀನಕಾಲದ ವೈಜ್ಞಾನಿಕ ವಿಚಾರಧಾರೆಯನ್ನು ಎದುರಿಸಿ ಹಿಂದೂಧರ್ಮವು ಪುಟವಿಟ್ಟ ಚಿನ್ನದ ಹಾಗೆ ಬೆಳಗುವಂತೆ ಮಾಡಿದರು. ಸ್ವಾಮೀಜಿಯವರ ಬದುಕೇ ಸನಾತನ ಹಿಂದೂಧರ್ಮದ ವಿನೂತನ ಪ್ರಯೋಗವಾಗಿ ಯಶಸ್ವಿಯಾಗಿ ಅರಳಿ ಬೆಳಗಿರುತ್ತದೆ. ಮಾನವನು ತನ್ನ ಅಂತರಂಗದಲ್ಲಿ ಅಡಗಿರುವ ಪರಮಾತ್ಮಶಕ್ತಿಯನ್ನು ಪ್ರಕಾಶಗೊಳಿಸಿ ಶಕ್ತಿಸಂಪನ್ನನಾಗಿ, ಧೀರನಾಗಿ ಜೀವನ ಕ್ಷೇತ್ರದಲ್ಲಿ ಕಾರ್ಯೋನ್ಮುಖನಾಗಬೇಕು ಎಂಬುದು ಸ್ವಾಮೀಜಿಯವರ ನಿಲುವಾಗಿತ್ತು. ತ್ಯಾಗ ಮತ್ತು ಸೇವೆಯೇ ಬಾಳಿನ ಆದರ್ಶವಾಗಿದ್ದು ಆತ್ಮದ ಮೋಕ್ಷಕ್ಕಾಗಿ ಮತ್ತು ಜಗತ್ತಿನ ಕಲ್ಯಾಣಕ್ಕಾಗಿ ಜೀವಿಯು ಜೀವನ ಎಸಗಬೇಕು ಎಂಬುದು ಸ್ವಾಮೀಜಿಯವರ ಬೋಧನೆಯ ಪಲ್ಲವಿಯಾಗಿತ್ತು.

ಹಿಂದೂಧರ್ಮದ ಸರಿಯಾದ ಹೆಸರು ವೈದಿಕಧರ್ಮ, ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ವೇದಾಂತಧರ್ಮ ಎಂದು ಹೇಳಿ, ವೇದಾಂತ ಧರ್ಮವೇ ಯುಗಧರ್ಮ, ವಿಶ್ವಧರ್ಮ ಎಂದು

ಸಾರಿದರು, ಸ್ವಾಮೀಜಿ. ವೇದಾಂತ ಧರ್ಮವೆಂದಾಗ ಜಗತ್ತಿನ ಜನರಿಗೆಲ್ಲ ಒಂದೇ ಧರ್ಮ ಎಂದರ್ಥವಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತಾ "ದೇವರ ಸಾಕ್ಷಾತ್ಕಾರವೇ ಧರ್ಮದ ನಿಜವಾದ ಗುರಿ— ವೇದಾಂತ ಎಂದರೆ, ಜ್ಞಾನದ ಅಂತಿಮಾವಸ್ಥೆ. ಜ್ಞಾನವೆಂದರೆ ಪರ ಮಾತ್ಮ ಸಾಕ್ಷಾತ್ಕಾರ— ಅದೇ ವೇದಾಂತ" ಎಂದು ಹೇಳಿದರು. ಮಾನವರು ಎಲ್ಲೇ ಇರಲಿ, ಪರಮಾತ್ಮ ಸಾಕ್ಷಾತ್ಕಾರ ಹೊಂದ ಬೇಕಾದುದೇ ನಿಜವಾದ ಬಾಳಿನ ಗುರಿ ಆಗಬೇಕು ಎಂದು ವಿವರಿಸಿದರು. ದೇವರ ಸಾಕ್ಷಾತ್ಕಾರಕ್ಕೆ ಇರುವ ವಿಭಿನ್ನ ಹಾದಿಗಳೆ ಜಗತ್ತಿನಲ್ಲಿ ಕಂಡು ಬರುವ ವಿವಿಧ ಧರ್ಮಗಳು. ಹಾದಿ ಬೇರೆ ಆದರೂ ಗುರಿ ಒಂದೇ. ಭಾವ ಒಂದೇ. ಇದು ಮಾನವನ ಮನದಾಳದಲ್ಲಿ ನೆಲೆ ನಿಂತರೆ ಮತೀಯವಾಗಿ, ಜನಾಂಗೀಯವಾಗಿ, ದೇಶೀಯವಾಗಿ ವಿರಸ-ಸೆಣಸಾಟಕ್ಕೆ ಅವಕಾಶವಿಲ್ಲ ಎಂಬುದು ಸ್ವಾಮಿ ವಿವೇಕಾನಂದರು ಬಾಳಿನುದ್ದಕ್ಕೂ ಮತ್ತೆ ಮತ್ತೆ ಸಾರಿದ ಸುವರ್ಣ ಉಪದೇಶಗಳಾಗಿವೆ.

> ಹಿಂದೂಧರ್ಮವು ಮೃತಪ್ರಾಯವಾಗಿದ್ದಾಗ ಇದ್ದಕ್ಕಿದ್ದಂತೆಯೇ ಅದರಲ್ಲಿ ಹೊಸ ಚಿಗುರು ಕಾಣಿಸಿಕೊಂಡಿತು, ಮತ್ತು ಅದರ ದೇಹವು ರುಗ್ಣಶಯ್ಯೆಯಿಂದ ಶಾಶ್ವತ ಆರೋಗ್ಯದ ಚಿಹ್ನೆಯೊಂದಿಗೆ ಮೇಲೆದ್ದಿತು.

***(ವಿಶ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರ "ಹಿಂದೂಧರ್ಮ" ದ ಮೇಲಿನ ಉಪನ್ಯಾಸವನ್ನು ಕುರಿತು Madras Times ಆಂಗ್ಲೋ ಇಂಡಿಯನ್ ದೈನಿಕ).***

ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸ್ವಾಮಿ ವಿವೇಕಾನಂದರು ನೀಡಿದ ಹಿಂದೂಧರ್ಮದ ಸಮಗ್ರ ಚಿತ್ರಣವನ್ನು ಹೀಗೆ ಕ್ರೋಢೀಕರಿಸಬಹುದು:

೧. ಹಿಂದೂಧರ್ಮದಲ್ಲಿ ಶ್ರುತಿ ಮತ್ತು ಸ್ಮೃತಿಗಳೆಂಬ ಎರಡು ಬಗೆಯ ಶಾಸ್ತ್ರಗಳಿವೆ. ಇವುಗಳಲ್ಲಿ ಶ್ರುತಿ ಧರ್ಮದ ಮೂಲ ಭೂತ ತತ್ತ್ವಗಳಿಗೆ ಸಂಬಂಧಿಸಿದುದು, ಮತ್ತು ಇದು ಯಾವಾಗಲೂ ಬದಲಾಗದೇ ಉಳಿಯುತ್ತದೆ. ಸ್ಮೃತಿ ವ್ಯಕ್ತಿ ಮತ್ತು ಸಮಾಜದ ದೈನಂದಿನ ನಡೆನುಡಿಗಳಿಗೆ ಸಂಬಂಧಿಸಿದುದು. ಇದು ಕಾಲಾನುಕಾಲಕ್ಕೆ ಬದಲಾಗುತ್ತಿರುತ್ತದೆ ಮತ್ತು ಬದಲಾಗಲೇಬೇಕು.

೨. ಮಾನವನಲ್ಲಿ ದಿವ್ಯಶಕ್ತಿ ಅಂದರೆ ಪರಮಾತ್ಮಶಕ್ತಿ ಸುಪ್ತವಾಗಿ ಅಡಗಿದೆ. ಬಾಳಿನ ಗುರಿಯು ಆ ದಿವ್ಯತೆಯ ಸಾಕ್ಷಾತ್ಕಾರವನ್ನು ಹೊಂದುವುದಾಗಿದೆ.

೩. ಅದಕ್ಕೆ ಹಾದಿಗಳು ಅನೇಕವಿವೆ. ಎಲ್ಲ ಹಾದಿಗಳ ಗುರಿಯೂ ಒಂದೇ ಆಗಿದ್ದು ಅದು ದಿವ್ಯತೆಯ ಸಾಕ್ಷಾತ್ಕಾರವಾಗಿದೆ. ಹಾಗಾಗಿ, ದಿವ್ಯತೆಯ ಸಾಕ್ಷಾತ್ಕಾರಕ್ಕೆ ಕಾರ್ಯೋನ್ಮುಖರಾಗುವಾಗ ವಿವಿಧ ಪಥಗಳ ಕುರಿತು ವೈಮನಸ್ಯ-ವೈಷಮ್ಯಗಳನ್ನು ಹೊಂದುವುದರಲ್ಲಿ ಅರ್ಥವಿಲ್ಲ, ಸಾರ್ಥಕತೆಯಿಲ್ಲ.

೪. ಮಾನವನಲ್ಲಿ ಭಗವಂತನನ್ನು ಕಂಡು ಸಮಗ್ರ ಮಾನವಕೋಟಿಗೆ ಸೇವೆ ಮಾಡಬೇಕು. ಮಾನವಸೇವೆಯೇ ದೇವರಸೇವೆ ಆಗಿರುತ್ತದೆ.

೫. ಜೀವಿಗೆ ದೇವರು ಸತ್ಯವಾಗಿರುವಂತೆ ಜಗತ್ತೂ ಸತ್ಯವಾಗಿರುತ್ತದೆ. ಏಕೆಂದರೆ ಏಕೇಶ್ವರನಾದ ದೇವರ ಮಾಯಾ ಸೃಷ್ಟಿಗೆ ಒಳಗಾದ ಜೀವ-ಜಗತ್ತು ಎಲ್ಲವೂ ದೇವರ ಸ್ವರೂಪಗಳಾಗಿವೆ. ದೇವರ ಸೃಷ್ಟಿಗೆ ಅಧೀನವಾದ ಜೀವ-ಜಗತ್ತು ದೇವರಿಂದ ಬೇರೆಯೆಂದು ದೇವರ ಮಾಯಾಪ್ರಭಾವದಿಂದಾಗಿ ಜೀವಿಗೆ ಕಂಡರೂ ಸರಿಯಾದ ವೇದಾಂತ ದೃಷ್ಟಿಯು ಅಂತರಂಗದಲ್ಲಿ ಮೂಡಿಬಂದಾಗ ಪರಮಾರ್ಥಸತ್ಯದ ನಿಜವಾದ ಅರಿವು ಬೆಳಗುತ್ತದೆ.

೬. ಹಿಂದೂಧರ್ಮದಲ್ಲಿ ಕಂಡುಬರುವ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ವೇದಾಂತಮಾರ್ಗಗಳು ಮೇಲ್ನೋಟಕ್ಕೆ ಬೇರೆ ಬೇರೆ ಎಂದು ಕಂಡುಬಂದರೂ ಸ್ವಭಾವತಃ ಒಂದಕ್ಕೊಂದು ಪೂರಕವಾಗಿವೆ. ಮಾನವನ ಆಧ್ಯಾತ್ಮಿಕ ವಿಕಾಸದ ಹಂತದಲ್ಲಿ ಈ ಮೂರು ಮಾರ್ಗಗಳು ಮೂರು ಹಂತವಾಗಿರುತ್ತವೆ.

೭. ಜೀವನರಂಗದಿಂದ ಹೆದರಿ ಓಡಿ ಹೋಗುವುದರಲ್ಲಿ ಅರ್ಥವಿಲ್ಲ, ಸಾಹಸವಿಲ್ಲ. ಜೀವನ ಎಂದರೆ ಕಷ್ಟ, ನೋವುಗಳ ವಿರುದ್ಧ ಧೈರ್ಯದಿಂದ, ಸಾಹಸದಿಂದ, ಭಗವದ್ಭಕ್ತಿಯಿಂದ ಹೋರಾಡಿ ಶಾಶ್ವತ ಆನಂದವನ್ನು ಪಡೆಯುವುದಾಗಿದೆ.

೮. ಜೀವನದಲ್ಲಿ ಭೌತಿಕ ಸುಖದಿಂದ ಜೀವಿಗೆ ಸಂತೋಷ ಲಭಿಸಿದರೂ ಅದೇ ನಿಜವಾದ, ಶಾಶ್ವತವಾದ, ಪೂರ್ಣವಾದ ಸುಖವಲ್ಲ. ಅದಕ್ಕಿಂತ ಮಿಗಿಲಾದ ಆತ್ಮಾನಂದವೇ ನಿಜವಾದ ಸುಖ.

೯. ವಿಜ್ಞಾನವು ಭೌತಿಕವಾಗಿ ಸತ್ಯವೆಂದು ಕಾಣುತ್ತದೆ. ಆದರೆ ಆತ್ಮವಿಜ್ಞಾನದ ಮುಂದೆ ಭೌತಿಕವಾದ ವಿಜ್ಞಾನ ಕೇವಲ ಪೂರ್ಣದ ಒಂದು ಅಂಶ ಎಂದು ಭಾಸವಾಗುತ್ತದೆ.

೧೦. ಯಾರೂ ತಮ್ಮ ತಮ್ಮ ಮತಗಳನ್ನು ಬದಲಿಸುವ ಅಗತ್ಯವಿಲ್ಲ. ಆದರೆ ಎಲ್ಲರೂ ಅವರವರ ಮತದಲ್ಲಿ ತತ್ತ್ವ-ಆಚಾರ ನಿಷ್ಠರಾಗಿ ಬಾಳುವ ಅಗತ್ಯವಿದ್ದು ಆತ್ಮಸಾಕ್ಷಾತ್ಕಾರಕ್ಕೆ ಅದರಿಂದ ಮಾತ್ರ ಸಾಧ್ಯವಾಗುತ್ತದೆ.

೧೧. ಜನಿಸಿದ ಮಾನವನಿಗೆ ಮರಣ ನಿಶ್ಚಯ. ಇಹದಲ್ಲಿ ಜೀವನ ಯಾರಿಗೂ ಶಾಶ್ವತವಲ್ಲ. ಎಲ್ಲಿಯತನಕ ಮಾನವನಿಗೆ ಜೀವನದಲ್ಲಿ ಲೌಕಿಕವಾದ, ಆಧ್ಯಾತ್ಮಿಕವಾದ ಭಯ ಇದೆಯೋ ಅಲ್ಲಿಯತನಕ ಅವನಿಗೆ ದೇವರ ರಕ್ಷೆ, ದೇವರಿಗೆ ಪ್ರಾರ್ಥಿಸು

ವುದರ ಅಗತ್ಯವಿದೆ. ದೇವರು ಮಾನವನಿಗೆ ಭರವಸೆಯ, ಅನುಗ್ರಹದ ಮಹಾಶಕ್ತಿಯಾಗಿ ಬೇಕೇ ಬೇಕು.

೧೨. ದೇವರ ಸಾಕ್ಷಾತ್ಕಾರಕ್ಕೆ ಸಹಾಯಕವಾಗಿರುವ ಕರ್ಮ, ಭಕ್ತಿ, ಧ್ಯಾನ, ಜ್ಞಾನ ಎಂಬ ಯೋಗ ಮಾರ್ಗಗಳೆಲ್ಲವೂ ಸಮಾನ ಯೋಗ್ಯತೆಯವುಗಳಾಗಿವೆ. ಹಾಗೆಯೇ ಒಂದಕ್ಕೊಂದು ಸಂಬಂಧ ಇದ್ದವುಗಳಾಗಿವೆ. ಹಾಗಾಗಿ ಸಾಧಕರು ಯಾವುದೇ ಯೋಗಮಾರ್ಗದಲ್ಲಿ ಸಾಗುತ್ತಿದ್ದರೂ ಇನ್ನಿತರ ಯೋಗಗಳ ತತ್ತ್ವವಿಚಾರಗಳನ್ನು ಸಮನ್ವಯಗೊಳಿಸಿಕೊಂಡು ಸಾಗಬೇಕಾಗಿರುವುದು ಅನುಕೂಲಕರ ಹಾಗೂ ಯೋಗ ಸಿದ್ಧಿಸಾಧನೆಗೆ ಸುಲಭ ವಿಧಾನವಾಗಿರುತ್ತದೆ.

ಸ್ವಾಮಿ ವಿವೇಕಾನಂದರು ನೀಡಿದ ಹಿಂದೂಧರ್ಮದ ಚಿತ್ರವು ಆಧುನಿಕ ಕಾಲದ ಜೀವನ-ಸವಾಲುಗಳಿಗೆ ಹೊಂದುವಂತೆ ಪ್ರಯೋಗಶೀಲವಾಗಿದೆ. ಅಲ್ಲದೆ ವೈದಿಕಶಾಸ್ತ್ರ ಸಂಪ್ರದಾಯಕ್ಕೆ ಮೂಲತಃ ಚ್ಯುತಿಬರದಂತೆ ಸ್ವಾಮೀಜಿಯವರು ತಮ್ಮ ಬೋಧನೆ-ಆಚರಣೆಗಳನ್ನು ಅಭಿವ್ಯಕ್ತಗೊಳಿಸಿರುತ್ತಾರೆ ಎನ್ನುವುದು ಅವರ ಹಿರಿಮೆ ಹಾಗೂ ವೈಶಿಷ್ಟ್ಯವಾಗಿರುತ್ತದೆ.

ಸ್ವಾಮಿ ವಿವೇಕಾನಂದರು ಅದ್ವೈತ ವೇದಾಂತವೇ ಮಾನವ ಕಲ್ಯಾಣ ಸಾಧನಧರ್ಮ ಎಂದು ಸಾರಿ, ಪ್ರಂಚದಲ್ಲಿರುವ ಎಲ್ಲ ಧರ್ಮಪಥಗಳೂ ಅದ್ವೈತವೇದಾಂತಿಗೆ ಮಾನ್ಯ ಎಂದು ಹೇಳಿದರು. ಇದರ ಆಧಾರದ ಮೇಲೆ ಸರ್ವಧರ್ಮಸಹಬಾಳ್ವೆ, ಸರ್ವಧರ್ಮ ಸಮಾನತೆ ಸಾಧ್ಯ ಎಂಬುದನ್ನು ಸ್ಪಷ್ಟಪಡಿಸಿ ಸನಾತನ ಹಿಂದೂ ಧರ್ಮದ ಭವ್ಯಸಂದೇಶವನ್ನು ಮನುಕುಲಕ್ಕೆ ನೀಡಿದರು, ಸ್ವಾಮೀಜಿ. ಸ್ವಾಮೀಜಿಯವರು ಅದ್ವೈತ ವೇದಾಂತಿಗಳಾಗಿದ್ದರೂ ಪರಂಪರೆಯ ಅದ್ವೈತ ಸಿದ್ಧಾಂತಕ್ಕೆ ನೂತನವಾದ ವಿವರಣೆಯನ್ನು ನೀಡಿ ಮಾನವಪ್ರೇಮ, ಮಾನವಸೇವೆ ಎಂಬ ಎರಡು ಮಹತ್ವದ ಜೀವನ ಸಿದ್ಧಾಂತವನ್ನು ರೂಪಿಸಿ ಹೊಸಯುಗದಲ್ಲಿ ಹೊಸ ಮಂತ್ರ ದ್ರಷ್ಟಾರರಾಗಿ ವಿನೂತನವಾದ ಸಂದೇಶವನ್ನು ಸಾರಿರುತ್ತಾರೆ. ಅವರ ದಿವ್ಯಾನುಭೂತಿಗೆ ಅನುಗುಣವಾಗಿ **ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ**—"ಆತ್ಮದ ಮೋಕ್ಷಕ್ಕಾಗಿ ಹಾಗೂ ಜಗತ್ತಿನ ಕಲ್ಯಾಣಕ್ಕಾಗಿ," "ಮಾನವಸೇವೆಯೇ ಮಾಧವಪೂಜೆ" ಎಂಬ ಎರಡು ದಿವ್ಯ ಜೀವನಸೂತ್ರಗಳನ್ನು ಜಗತ್ತಿಗೆ ನೀಡಿ ಹಿಂದೂಧರ್ಮವು ಲೌಕಿಕ ಮತ್ತು ಪಾರಮಾರ್ಥಿಕ ಎಂಬ ಎರಡು ದೃಷ್ಟಿಯಿಂದಲೂ ಪೂರ್ತಿಯಾಗಿ ಫಲಕಾರಿಯಾದ ಸನಾತನ ಸುಂದರಧರ್ಮ ಎಂಬುದನ್ನು ಸ್ಪಷ್ಟಪಡಿಸಿರುತ್ತಾರೆ. ಸ್ವಾಮೀಜಿಯವರು ಅದ್ವೈತಿಗಳಾಗಿ ಇದ್ದುಕೊಂಡು ಸಂಪ್ರದಾಯದಂತೆ ವ್ಯಾವಹಾರಿಕ ಪ್ರಪಂಚವನ್ನು ಅಲ್ಲಗಳೆಯದೆ ವ್ಯಾವಹಾರಿಕ ಪ್ರಪಂಚವು ಪಾರಮಾರ್ಥಿಕ ಸತ್ಯದ ಸಾಕ್ಷಾತ್ಕಾರಕ್ಕೆ ಸಹಕಾರಿಯಾಗುವಂತೆ ವ್ಯಾವಹಾರಿಕವನ್ನೂ ಪಾರಮಾರ್ಥಿಕ ದೃಷ್ಟಿಯಿಂದ ಸಂಪನ್ನಗೊಳಿಸಿ ಕೊನೆಗೆಲ್ಲವೂ ಪಾರಮಾರ್ಥಿಕವಾಗಬೇಕೆಂದು ಸಾರಿರುತ್ತಾರೆ. ಇದು ಅವರ ವೈಶಿಷ್ಟ್ಯವಾಗಿ ಇರುತ್ತದೆ. ತಮ್ಮ ಈ ನಿಲುವನ್ನು ಸ್ವಾಮೀಜಿಯವರು ತುಂಬ ನಿಖರವಾಗಿ ಈ ಮಾತುಗಳಲ್ಲಿ ಹೀಗೆ ಸ್ಪಷ್ಟಪಡಿಸಿರುತ್ತಾರೆ : "ತ್ಯಾಗದ ಆದರ್ಶವು ವೇದಾಂತದ ಬೋಧನೆಗಳಲ್ಲಿ ಎತ್ತರ ಏರಿ ಬೆಳಗಿದಷ್ಟು ಇನ್ನೆಲ್ಲೂ ಬೆಳಗಿರುವುದಿಲ್ಲ. ಆದರೆ ಅದೇ ಸಂದರ್ಭದಲ್ಲಿ ಅದು ಆತ್ಮಹಾನಿಕರ ಶುಷ್ಕ ಸಂದೇಶವನ್ನು ನೀಡುವುದಿಲ್ಲ. ವೇದಾಂತ ಬೋಧಿಸುವ ತ್ಯಾಗದ ನಿಜವಾದ ಅರ್ಥವೇನೆಂದರೆ ಜಗತ್ತನ್ನು ದೈವೀಕರಿಸುವುದೇ ಆಗಿದೆ. ಅಂದರೆ ನಾವು ಭಾವಿಸುವ, ನಮಗೆ ಕಾಣುತ್ತಿರುವ ಪ್ರಪಂಚವನ್ನು ತ್ಯಜಿಸುವುದು ಮತ್ತು ಅದು ನಿಜವಾಗಿ ದೈವೀಸ್ವರೂಪವೇ ಎಂಬುದನ್ನು ತಿಳಿಯುವುದು. ಅದು ದೇವರಲ್ಲದೆ ಇನ್ನೇನೂ ಆಗಿಲ್ಲ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨:೮೩).

ತಾತ್ಪರ್ಯವಾಗಿ ಹೇಳುವುದಾದರೆ ಸ್ವಾಮೀಜಿಯವರು ಮಾನವನಲ್ಲಿ ಸ್ವಭಾವತಃ ಇರುವ ಪ್ರೇಮಶಕ್ತಿಯನ್ನು ಉದಾತ್ತೀಕರಿಸಿ ಭಗವತ್ಪ್ರೇಮವನ್ನಾಗಿಸಿ, ತನ್ನ ಅಂತರಂಗ ಹಾಗೂ ಬಹಿರಂಗದಲ್ಲಿ ಸರ್ವೆಡೆಯಲ್ಲೂ ಅದು ವ್ಯಾಪಕವಾಗಿ ಬಳಕೆಯಲ್ಲಿ ಬರುವಂತೆ ಮಾಡಿ ತನ್ಮೂಲಕ ಜೀವನದಲ್ಲಿ ಮಾನವನು ಮಾಧವನಾಗಬೇಕು ಎಂಬುದನ್ನು ವಿಧವಿಧವಾದ ರೀತಿಯಲ್ಲಿ ತಮ್ಮ ಜೀವನ ಮತ್ತು ಬೋಧನೆಗಳ ಮೂಲಕ ಸ್ಪಷ್ಟಪಡಿಸಿ ಹಿಂದೂಧರ್ಮದ ಸುಂದರ ಚಿತ್ರವನ್ನೂ ಮೂಡಿಸಿರುತ್ತಾರೆ. ಮಾನವನು ಪ್ರೇಮದ ಮೂಲಕ—ಭಕ್ತಿಯೋಗದ ಮೂಲಕ ಮಾಧವನಾಗಿ ದ್ವೈತಿಯು ಅದ್ವೈತಿಯಾಗಿ ದಿವ್ಯಾನಂದ ಸ್ವರೂಪವನ್ನು ಹೊಂದುವ ಕುರಿತು ಸ್ವಾಮೀಜಿಯವರು ತಮ್ಮ ಆಚಾರ್ಯವಾಣಿಯಲ್ಲಿ ಅನುಗ್ರಹಿಸಿದ ಬೋಧನೆಯ ನುಡಿಗಳು ಇಂತಿವೆ:

"ಪ್ರೇಮಧರ್ಮದಲ್ಲಿ ನಾವೆಲ್ಲರೂ ದ್ವೈತಿಗಳಾಗಿ ಪ್ರಾರಂಭಿಸಬೇಕು... ಆದರೆ, ಅಂತಿಮವಾಗಿ ಈ ಪ್ರೇಮ ಜ್ಯೋತಿಯ ಸಾನ್ನಿಧ್ಯದಲ್ಲಿ ಮಾನವನು ಬದಲಾವಣೆಯಾಗುತ್ತಾನೆ ಮತ್ತೆ ಕೊನೆಗೆ ಪ್ರೇಮ, ಪ್ರೇಮಿಸುವವನು, ಮತ್ತು ಪ್ರೇಮಿ ಎಲ್ಲರೂ ಒಂದು ಎಂಬ ಸುಂದರವೂ ಸ್ಫೂರ್ತಿದಾಯಕವೂ ಆದ ಸತ್ಯ ಸಾಕ್ಷಾತ್ಕಾರವನ್ನು ಹೊಂದುತ್ತಾನೆ." (ಕೃತಿಶ್ರೇಣಿ, ಭಕ್ತಿಯೋಗ).

ಹೀಗೆ ಸ್ವಾಮಿ ವಿವೇಕಾನಂದರು ತಮ್ಮ ಜೀವನ-ಸಂದೇಶಗಳ ಮೂಲಕ ಹಿಂದೂಧರ್ಮದ ವಿಚಾರವಾಗಿ ನೂತನವಾದ ದೃಷ್ಟಿಕೋನವನ್ನು ನೀಡಿ, ಮನುಕುಲದ ಉನ್ನತಿಗೆ ಶ್ರಮಿಸಲು ಹಿಂದುಗಳೆಲ್ಲರಿಗೂ ಋಷಿಸದೃಶವಾದ ಕರೆ ನೀಡಿರುತ್ತಾರೆ. ಅವರು ನೀಡಿದ ಹಿಂದೂಧರ್ಮದ ಚಿತ್ರದಲ್ಲಿ ಪ್ರಮುಖವಾಗಿ ಸಮಾನ ನೆಲೆಗಟ್ಟಿನ ಐದು ಅಂಶಗಳನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಬಹುದು. ಅವುಗಳ ಅನುಷ್ಠಾನದಿಂದ ಹಿಂದೂಗಳಲ್ಲಿ ಪರಸ್ಪರ ಪ್ರೀತಿ, ಸೌಹಾರ್ದ, ಸಹಕಾರ ಕೂಡಿಬರುವಂತಾಗಿ ವಿಶ್ವಮೈತ್ರಿಸಾಧನೆ ಮತ್ತು ಶಾಂತಿಸಿದ್ಧಿಗೆ ಸಹಕಾರಿಯಾಗುತ್ತದೆ. ಆ ಪ್ರಮುಖವಾದ ಪಂಚ ಅಂಶಗಳು ಯಾವುವೆಂದರೆ:

೧. ವೇದಗಳೆಂದರೆ ಧರ್ಮದ ರಹಸ್ಯದ ಕುರಿತಾದ ಅವಿನಾಶಿಯಾದ ಬೋಧನೆಗಳೆಂದು ನಾವು ನಂಬುತ್ತೇವೆ. ಈ ಪವಿತ್ರ

ಸಾಹಿತ್ಯವು ಅಪೌರುಷೇಯ, ಅನಾದಿ ಮತ್ತು ಅನಂತ ಎಂದು ನಾವು ನಂಬುತ್ತೇವೆ.

೨. ಇಡಿ ಪ್ರಪಂಚದ ಸೃಷ್ಟಿ ಮತ್ತು ಪಾಲನೆಯ ಮಹಾ ಶಕ್ತಿಯಾಗಿದ್ದು, ಈ ಪ್ರಪಂಚವು ನಿಯತವಾಗಿ ಮತ್ತೆ ಮರಳಿ ಮೂಡಿ ಬರಲು ಯಾರಲ್ಲಿಗೆ ಬಂದು ಸೇರುತ್ತದೋ ಮತ್ತು ಯಾವ ಈ ವಿಶ್ವವೆಂಬ ವಿಸ್ಮಯವು ಮತ್ತೆ ಮತ್ತೆ ಯಾರಿಂದ ಮೂಡಿಬರುತ್ತದೋ ಆ ದೇವರನ್ನು ನಾವು ನಂಬುತ್ತೇವೆ. ದೇವರ ಕುರಿತಾದ ಕಲ್ಪನೆ ಬಗೆಗೆ ನಾವು ಭಿನ್ನಾಭಿಪ್ರಾಯ ತಳೆಯಬಹುದು.... ಆದರೆ ದೇವರ ಕುರಿತು ಬೋಧಿಸಿರಿ... ನಮಗಷ್ಟೇ ಬೇಕಾಗಿರುವುದು...

೩. ಪ್ರಕೃತಿಯು ಆದಿ ಅಂತ್ಯರಹಿತವಾದುದು ಎಂಬುದನ್ನು ನಾವು ನಂಬುತ್ತೇವೆ. ಜಗತ್ತು ಸಹಸ್ರಾರು ವರ್ಷಗಳ ಹಿಂದೆ ಸೃಷ್ಟಿಸಲ್ಪಟ್ಟು, ಮುಂದೆ ಒಂದು ದಿವಸ ಶಾಶ್ವತವಾಗಿ ನಾಶಪಡಿಸಲ್ಪಡುವುದು ಎಂಬುದನ್ನು ನಾವು ನಂಬುವುದಿಲ್ಲ.

೪. ಮನುಷ್ಯನು ಬರೇ ಭೌತಿಕ ಶರೀರಿಯಲ್ಲ... ಅವನಲ್ಲಿ ಎಂದಿಗೂ ಬದಲಾಗದಂತಹ ಅವಿನಾಶಿಯಾದಂತಹ ಆತ್ಮವಿದೆ ಎಂಬುದನ್ನು ನಾವು ನಂಬುತ್ತೇವೆ.

೫. ನಾವು ಶಾಕ್ತರೇ ಇರಲಿ, ಸೌರರೇ ಇರಲಿ, ಇಲ್ಲ ವೈಷ್ಣವರಾಗಿರಲಿ,... ನಾವೆಲ್ಲರೂ ಆತ್ಮವು ಸ್ವಭಾವತಃ ಪರಿಶುದ್ಧ, ಪರಿಪೂರ್ಣ, ಅನಂತ ಶಕ್ತಿಯಿಂದ ಕೂಡಿದೆ ಮತ್ತು ದಿವ್ಯವಾಗಿದೆ ಎಂಬುದನ್ನು ನಂಬುತ್ತೇವೆ..... ಭಾರತದಲ್ಲಿ ಆಧ್ಯಾತ್ಮಿಕ ಆಗಸದಿಂದ ಮೂಡಿಬಂದ ಮಹತ್ತಾದ ಶಕ್ತಿಯ ಶಬ್ದವೇ "ಅನುಭೂತಿ"ಯಾಗಿದ್ದು, ನಮ್ಮ ಶಾಸ್ತ್ರಗ್ರಂಥಗಳು ಮಾತ್ರ "ದೇವರನ್ನು ಕಾಣಬೇಕು" ಎಂಬುದಾಗಿ ಪುನಃಪುನಃ ಘೋಷಿಸುತ್ತವೆ.... ದೇವರು ಇದ್ದಾನೆ ಎಂಬುದಕ್ಕೆ ದೃಷ್ಟಾಂತವು ನಮ್ಮ ತರ್ಕವಲ್ಲ, ಬದಲು "ದೇವರನ್ನು ಸ್ವತಃ ನಮ್ಮ ಪ್ರಾಚೀನರು ಹಾಗೂ ಆಧುನಿಕರು ಕಂಡಿರುತ್ತಾರೆ" ಎಂಬುದೇ ಆಗಿರುತ್ತದೆ... (ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ೩:೨೨೯-೨೩೩).

> ವಿವೇಕಾನಂದರು ಶಿಕ್ಷಿತ ಹಿಂದುಗಳ ಶ್ರದ್ಧೆಯನ್ನು ಪುನಃಸ್ಥಾಪಿಸಿದರು. ಅವರ ಹಿಂದಿನ ಸುಧಾರಕರು ಈ ವಿಷಯದಲ್ಲಿ ಯಶಸ್ವಿಯಾಗಿರಲಿಲ್ಲ. ೧೯೦೨ರಲ್ಲಿ ವಿವೇಕಾನಂದರ ದೇಹತ್ಯಾಗವಾದಾಗ ಹಿಂದೂಧರ್ಮವು ಹೊಸಜೀವಕಳೆಯಿಂದ ತುಂಬಿತುಳುಕುತ್ತಿದ್ದುದು ಸ್ಪಷ್ಟವಾಗಿ ಎದ್ದುಕಾಣುತ್ತಿತ್ತು.
>
> –ಎ.ಎಲ್. ಬಾಷಮ್

ಹೀಗೆ ಪ್ರಾಚೀನಕಾಲದಲ್ಲಿ ಸನಾತನ ಹಿಂದೂಧರ್ಮದ ರಕ್ಷಣೆ ಹಾಗೂ ಪೋಷಣೆಗಾಗಿ ಮೂಡಿ ಬಂದ ಮಹರ್ಷಿಗಳು, ಆಚಾರ್ಯರು, ಸ್ವಾಮಿಗಳಂತೆ ಆಧುನಿಕ ಕಾಲದಲ್ಲಿ ಅದೇ ಪರಂಪರೆಯಲ್ಲಿ ಮೂಡಿಬಂದವರು ಸ್ವಾಮಿ ವಿವೇಕಾನಂದರು. ನವಯುಗದ ಸಮಸ್ಯೆಗಳು, ಸವಾಲುಗಳನ್ನು ಎದುರಿಸಲು ಸರಿಯಾಗುವಂತೆ ಸ್ವಾಮಿಗಳು ಹಿಂದೂಧರ್ಮದ ತತ್ತ್ವ-ಸೂತ್ರಗಳ ಶಕ್ತಿ-ವ್ಯಾಪಕತೆಗಳನ್ನು ತಮ್ಮ ದಿವ್ಯಾನುಭೂತಿಯ ಬೆಳಕಿನಲ್ಲಿ ಹುಡುಕಿ ಹೊರತಂದು ಮತ್ತೆ ಹಿಂದೂಧರ್ಮವು ಹಿಂದಿನಂತೆ ಇಂದಿಗೂ—ಎಲ್ಲ ಕಾಲಕ್ಕೂ ಪ್ರಸ್ತುತ, ಪ್ರಯೋಗಸಾಧ್ಯ, ಪರಿಪೂರ್ಣಶಕ್ತಿಸಂಪನ್ನ ಎಂಬುದನ್ನು ಸ್ಪಷ್ಟಪಡಿಸಿರುತ್ತಾರೆ. ಅದರಂತೆ ದೇಶ-ವಿದೇಶಗಳಲ್ಲಿ ಸ್ವಾಮಿ ವಿವೇಕಾನಂದರು ಜನಕೋಟಿಯ ಹೃನ್ಮಂದಿರಗಳಲ್ಲಿ ನವಯುಗಾಚಾರ್ಯ, ಯತಿರಾಜ, ವೀರವೇದಾಂತಿ ಎಂದು ಗೌರವಾದರಗಳಿಗೆ ಪಾತ್ರರಾಗಿ ನಿತ್ಯಸ್ಮರಣೀಯರೂ ಪೂಜನೀಯರೂ ಆಗಿ ಬೆಳಗುತ್ತಿದ್ದಾರೆ.

ಸ್ವಾಮಿ ವಿವೇಕಾನಂದರು ೧೮೯೧ರಲ್ಲಿ ಅಬು ಪರ್ವತದಲ್ಲಿ ಒಬ್ಬ ಮುಸ್ಲಿಂ ಲಾಯರನ ಅತಿಥಿಯಾಗಿದ್ದರು. ಖೇತ್ರಿ ರಾಜನ ಕಾರ್ಯದರ್ಶಿಗಳಾದ ಜಗಮೋಹನಲಾಲ್ ಆ ಮುಸ್ಲಿಂ ಲಾಯರನ ಮನೆಗೆ ಬಂದಿದ್ದಾಗ ಅಲ್ಲಿ ಹಿಂದೂ ಸಂನ್ಯಾಸಿಯೊಬ್ಬರು ಇರುವುದನ್ನು ನೋಡಿ ಆಶ್ಚರ್ಯವಾಗಿ ಸ್ವಾಮೀಜಿಯವರನ್ನು ಕೇಳಿದರು: "ಸ್ವಾಮೀಜಿ, ನೀವು ಹಿಂದೂ ಸಂನ್ಯಾಸಿಯಾಗಿ ಮುಸ್ಲಿಮನೊಡನೆ ವಾಸಿಸುತ್ತಿರುವಿರಲ್ಲ?" ಸ್ವಾಮೀಜಿಯವರಿಗೆ ಜಾತಿಭೇದ, ಮತೀಯ ಮನೋಭಾವನೆಗಳನ್ನು ಕಂಡರೆ ಆಗುತ್ತಿರಲಿಲ್ಲ. ಆದ್ದರಿಂದ ಅವರು ಸ್ವಲ್ಪ ಗಡಸು ಧ್ವನಿಯಲ್ಲಿ ಹೇಳಿದರು : "ಮಹಾಶಯರೆ, ಏನು ಹೇಳುತ್ತಿರುವಿರಿ? ನಾನು ಸಂನ್ಯಾಸಿ. ನಾನು ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿದ್ದೇನೆ. ನಾನು ಜಾಡಮಾಲಿಯ ಜೊತೆಯೂ ಊಟ ಮಾಡಬಲ್ಲೆ. ನನಗೆ ಇದನ್ನು ದೇವರು ಒಪ್ಪುವನೋ ಇಲ್ಲವೋ ಎಂದು ಹೆದರುವ ಕಾರಣವಿಲ್ಲ. ಏಕೆಂದರೆ ಇದು ದೇವರಿಗೆ ಸಮ್ಮತವೆ. ನನಗೆ ಶಾಸ್ತ್ರದ ಭಯವೂ ಇಲ್ಲ. ಏಕೆಂದರೆ ಇದಕ್ಕೆ ಶಾಸ್ತ್ರದ ಒಪ್ಪಿಗೆಯಿದೆ. ಆದರೆ ನಾನು ನಿಮ್ಮಂಥವರಿಗೆ ಮತ್ತು ನಿಮ್ಮ ಸಮಾಜಕ್ಕೆ ಹೆದರುತ್ತೇನೆ. ನಿಮಗೆ ದೇವರ ಬಗ್ಗೆಯಾಗಲಿ, ಶಾಸ್ತ್ರಗಳ ಬಗ್ಗೆಯಾಗಲಿ ಏನೂ ತಿಳಿಯದು. ನಾನು ಎಲ್ಲೆಲ್ಲಿಯೂ, ಅತ್ಯಂತ ಕ್ಷುದ್ರ ಜೀವಿಯಲ್ಲಿಯೂ ಬ್ರಹ್ಮನನ್ನು ನೋಡುತ್ತೇನೆ. ನನಗೆ ಮೇಲು ಕೀಳೆಂಬ ಭೇದವಿಲ್ಲ. ಶಿವ ಶಿವ!" ಈ ಮಾತುಗಳು ಜಗಮೋಹನಲಾಲರ ಮೇಲೆ ಬೆಂಕಿಯ ಮಳೆಗರೆದಂತಾಯಿತು. ಅವರು ಸ್ವಾಮೀಜಿಯ ಪ್ರಚಂಡ ವ್ಯಕ್ತಿತ್ವದ ಮುಂದೆ ಮಂತ್ರಮುಗ್ಧರಾಗಿ ನಿಂತುಬಿಟ್ಟರು.

ಸ್ಥಳದಾನ: ಮೈಕ್ರೋ ಲ್ಯಾಬ್ ಲಿಮಿಟೆಡ್, ಬೆಂಗಳೂರು